38.		ಹಲಗನಹಳ್ಳಿ	ಪಿರಿಯಾಪಟ್ಟಣ
39.	ರಾಯಚೂರು	ರಾಯಚೂರು	ರಾಯಚೂರು ಟೌನ್
40.		ಮಾನ್ವಿ	ಮಾನ್ವಿ ಟೌನ್
41.		ರಾಯಚೂರು	ಗಿಲ್ಲಸಗೂರು
42.	ರಾಮನಗರ	ಚನ್ನಪಟ್ಟಣ	ಚನ್ನಪಟ್ಟಣ ಟೌನ್
43.		ಮಾಗಡಿ	ಮಾಗಡಿ ಟೌನ್
44.	ಶಿವಮೊಗ್ಗ	ಶಿವಮೊಗ್ಗ	ಮೆಲಿನ ಹನಸವಾಡಿ
45.		ಶಿಕಾರಿಪುರ	ಶೀರಾಳಕೊಪ್ಪ
46.	ತುಮಕೂರು	ಶಿರಾ	ಶಿರಾ ಟೌನ್
47.		ಕುಣಿಗಲ್	ಕುಣಿಗಲ್ ಟೌನ್
48.	ಉತ್ತರ ಕನ್ನಡ	ದಾಂಡೇಲಿ	ಅಂಬೆವಾಡಿ
	ಪದವಿ ಪೂರ್ವ ಮೊರಾರ್ಜಿದೇಸಾಯಿ ವಸತಿ ಕಾಲೇಜುಗಳು		
49.	ರಾಮನಗರ	ರಾಮನಗರ	ರಾಮನಗರ
50.	ಬೀದರ್	ಬೀದರ್	ಬೀದರ್
51.	ದಕ್ಷಿಣ ಕನ್ನಡ	ಉಳ್ಳಾಲ	ದೇರಳಕಟ್ಟೆ

ಅಲ್ಪಸಂಖ್ಯಾತರ ಶಾದಿಮಹಲ್‌ಗಳು

941 (1469) ಶ್ರೀ ತನ್ವೀರ್ ಸೇಠ್ (ನರಸಿಂಹರಾಜ) : ಮಾನ್ಯ ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ಅಲ್ಪಸಂಖ್ಯಾತರ ಶಾದಿಮಹಲ್‌ಗಳ ನಿರ್ಮಾಣಕ್ಕಾಗಿ ಸರ್ಕಾರಕ್ಕೆ ಬಂದಿರುವ ಪ್ರಸ್ತಾವನೆಗಳು ಎಷ್ಟು? ಎಷ್ಟು ಪ್ರಸ್ತಾವನೆಗಳನ್ನು ಅನುಮೋದಿಸಲಾಗಿದೆ;

ಆ) ಕಳೆದ 3 ವರ್ಷಗಳಲ್ಲಿ ಪ್ರಸ್ತಾವನೆಗಳಿಗೆ ಮಂಜೂರಾದ ಶಾದಿಮಹಲ್‌ಗಳು ಎಷ್ಟು;

ಇ) ಮೈಸೂರು ನಗರಕ್ಕೆ ಸಂಬಂಧಿಸಿದಂತೆ ಕಳೆದ 3 ವರ್ಷಗಳಲ್ಲಿ ಮಂಜೂರಾದ ಶಾದಿಮಹಲ್‌ಗಳೆಷ್ಟು ಮತ್ತು ಮಂಜೂರಾದ ಅನುದಾನ ಎಷ್ಟು?

ಪ್ರೊ.ಡಾ॥ ಮುಮ್ತಾಜ್ ಅಲಿ ಖಾನ್ (ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) :

ಅ) ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ಅಲ್ಪಸಂಖ್ಯಾತರ ಶಾದಿಮಹಲ್‌ಗಳ ನಿರ್ಮಾಣಕ್ಕಾಗಿ ಸರ್ಕಾರಕ್ಕೆ ಬಂದಿರುವ ಪ್ರಸ್ತಾವನೆಗಳ ವಿವರ ಈ ಕೆಳಕಂಡಂತಿವೆ.

ವರ್ಷ	ಬಂದ ಪ್ರಸ್ತಾವನೆಗಳು	ಅದರಲ್ಲಿ ಮಂಜೂರಾದ ಪ್ರಸ್ತಾವನೆಗಳು
2006–07	116	77
2007–08	130	74
2008–09	69	102 (ಹಿಂದಿನ ವರ್ಷದ ಬಾಕಿ ಪ್ರಸ್ತಾವನೆ ಸೇರಿ)

ಆ) ಕಳೆದ 3 ವರ್ಷಗಳಲ್ಲಿ ಪ್ರಸ್ತಾವನೆಗಳಿಗೆ ಮಂಜೂರಾದ ಶಾದಿಮಹಲ್/ಸಮುದಾಯ ಭವನಗಳ ವಿವರ ಕೆಳಕಂಡಂತಿವೆ (ಹಳೆಯದು ಮತ್ತು ಹೊಸ ಪ್ರಸ್ತಾವನೆಗಳು ಸೇರಿ)

ವರ್ಷ	ಸಂಸ್ಥೆಗಳ ಸಂಖ್ಯೆ
2006–07	77
2007–08	74
2008–09	102

ಇ) ಮೈಸೂರು ನಗರಕ್ಕೆ ಸಂಬಂಧಿಸಿದಂತೆ ಕಳೆದ 3 ವರ್ಷಗಳಲ್ಲಿ ಮಂಜೂರಾದ ಶಾದಿಮಹಲ್/ಸಮುದಾಯ ಭವನಗಳಿಗೆ ಬಿಡುಗಡೆ ಅನುದಾನ ಮತ್ತು ಸಂಸ್ಥೆಗಳ ವಿವರ ಕೆಳಕಂಡಂತಿವೆ.

(ರೂ. ಲಕ್ಷಗಳಲ್ಲಿ)

ವರ್ಷ	ಸಂಸ್ಥೆಗಳ ಸಂಖ್ಯೆ	ಬಿಡುಗಡೆ ಅನುದಾನ
2006–07	–	–
2007–08	3	15.00
2008–09	7	120.00

2009–10ರಲ್ಲಿ ಅನುಚ್ಛೇದ 275 ರಡಿ ಬಿಡುಗಡೆ ಮಾಡಲಾದ ಅನುದಾನ

942 (1428) ಶ್ರೀ ತಿಪ್ಪೇಸ್ವಾಮಿ (ಚಳ್ಳಕೆರೆ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2009–10ನೇ ಸಾಲಿನಲ್ಲಿ ಭಾರತ ಸಂವಿಧಾನದ ಅನುಚ್ಛೇದ 275ರ ಅಡಿಯಲ್ಲಿ ಪರಿಶಿಷ್ಟ ವರ್ಗದವರ ಮೂಲಭೂತ ಸೌಕರ್ಯ ಕಲ್ಪಿಸಲು ಚಿತ್ರದುರ್ಗ ಜಿಲ್ಲೆಯ ಯಾವ ವಿಧಾನ ಸಭಾ ಕ್ಷೇತ್ರಗಳಿಗೆ ಬಿಡುಗಡೆ ಮಾಡಲಾಗಿರುವ ಹಣ ಎಷ್ಟು; ಕ್ಷೇತ್ರವಾರು ವಿವರ ನೀಡುವುದು;

ಆ) ಈ ಅನುದಾನ ಬಿಡುಗಡೆಯಲ್ಲಿ ಚಳ್ಳಕೆರೆ ವಿಧಾನಸಭಾ ಕ್ಷೇತ್ರಕ್ಕೆ ಅನುದಾನದ ಬಿಡುಗಡೆಯಲ್ಲಿ ಆಗಿರುವ ತಾರತಮ್ಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಕಳೆದ ವರ್ಷದಲ್ಲಿಯೂ ಈ ರೀತಿ ತಾರತಮ್ಯವನ್ನು ಸರ್ಕಾರದ ಗಮನಕ್ಕೆ ತಂದಾಗ, ಸರಿಪಡಿಸುವುದಾಗಿ ಭರವಸೆ ನೀಡಿದ್ದರೂ ಪುನಃ ತಾರತಮ್ಯವನ್ನು ಮುಂದುವರಿಸಲು ಕಾರಣವೇನು;

ಈ) ಪರಿಶಿಷ್ಟ ವರ್ಗದವರ ಮೂಲಭೂತ ಸೌಕರ್ಯಕ್ಕೆ ಬಿಡುಗಡೆ ಮಾಡಿರುವ ಅನುದಾನವು ಪರಿಶಿಷ್ಟ ಪಂಗಡದ ಮೀಸಲು ಕ್ಷೇತ್ರವಾದ ಚಳ್ಳಕೆರೆ ಮಂಜೂರು ಮಾಡದಿರಲು ಕಾರಣಗಳೇನು?

ಶ್ರೀ ಡಿ. ಸುಧಾಕರ್ (ಸಮಾಜ ಕಲ್ಯಾಣ ಸಚಿವರು) :

ಅ) ಭಾರತ ಸಂವಿಧಾನ ಅನುಚ್ಛೇಧ 275(1)ರ ಮೇರೆಗೆ ಪರಿಶಿಷ್ಟ ವರ್ಗದವರ ಕಾಲೋನಿಗಳಲ್ಲಿ ಮೂಲಭೂತ ಸೌಲಭ್ಯ ಒದಗಿಸುವ ಸಲುವಾಗಿ ಅನುದಾನವನ್ನು ವಿಧಾನ ಸಭಾ ಕ್ಷೇತ್ರವಾರು ಹಂಚಿಕೆ ಮಾಡಲಾಗಿರುವುದಿಲ್ಲ. ಆದರೆ, ತಾಲ್ಲೂಕುವಾರು ಹಂಚಿಕೆ ಮಾಡಲಾಗಿರುತ್ತದೆ. 2009–10ನೇ ಸಾಲಿನಲ್ಲಿ ಚಿತ್ರದುರ್ಗ ಜಿಲ್ಲೆಯ ವಿವಿಧ ತಾಲ್ಲೂಕುಗಳಿಗೆ ಭಾರತ ಸಂವಿಧಾನ